# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 84 (491) |
| 2. | ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣ ಕಮಕನೂರ (ನಾಮ ನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 10-03-2020 |
| 4. | ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಮೂಲಗಳೆಷ್ಟು; ಅವು ಯಾವುವು; | ಕಲಬುರಗಿ ನಗರಕ್ಕೆ ಈ ಕೆಳಕಂಡ 3 ನೀರಿನ ಮೂಲಗಳಿರುತ್ತವೆ:<br>1) ಭೋಸ್ಗಾ ಕೆರೆ.<br>2) ಬೆಣ್ಣೆತೋರಾ ನದಿ.<br>3) ಭೀಮಾ ನದಿ. |
| ಆ) | ಈ ಮೂಲಗಳಿಂದ ಎಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ; | ಭೀಮಾ ನದಿಯಿಂದ ಪ್ರತಿದಿನ 55 ಎಮ್.ಎಲ್ ಹಾಗೂ ಬೆಣ್ಣೆತೋರಾ ನದಿಯಿಂದ 20 ಎಮ್.ಎಲ್. ಒಟ್ಟು 75 ಎಮ್.ಎಲ್ ಕುಡಿಯುವ ನೀರನ್ನು ಪ್ರತಿದಿನ ಸರಬರಾಜು ಮಾಡಲಾಗುತ್ತಿದೆ. ಬೋಸ್ಗಾ ಕೆರೆಯಲ್ಲಿ ನೀರಿನ ಸಂಗ್ರಹಣೆ ಇದ್ದಾಗ, ಬೇಸಿಗೆ ಕಾಲದಲ್ಲಿ ಪ್ರತಿದಿನ 7 ರಿಂದ 8 ಎಮ್.ಎಲ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. |
| ಇ) | ನಗರದ ಕುಡಿಯುವ ನೀರಿನ ಬೇಡಿಕೆ ಎಷ್ಟು; | ಕಲಬುರಗಿ ನಗರದ ಪ್ರಸ್ತುತ 6,00,000 ಜನಸಂಖ್ಯೆಗೆ ಕುಡಿಯುವ ನೀರಿನ ಬೇಡಿಕೆಯು 93 ದಶಲಕ್ಷ ಲೀಟರ್ ಇರುತ್ತದೆ. |
| ಈ) | ನಗರದ ಕುಡಿಯುವ ನೀರನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವುದಕ್ಕೆ ಕೈಗೊಂಡಿರುವ ಕ್ರಮಗಳೇನು? | ಕಲಬುರಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ವಿಶ್ವಬ್ಯಾಂಕ್ ನೆರವಿನಿಂದ ಕೆಯುಡಬ್ಲ್ಯೂಎಸ್‌ಎಂಪಿ ಯೋಜನೆಯಡಿ 24/7 ನಿರಂತರ ನೀರು ಸರಬರಾಜು. ಯೋಜನೆಯನ್ನು ಕೆಯುಐಡಿಎಫ್‌ಸಿ ವತಿಯಿಂದ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಡಿ ಬೆಣ್ಣೆತೋರಾ ಜಲಾಶಯದಿಂದ 55 ಎಂ.ಎಲ್.ಡಿ ಹೆಚ್ಚುವರಿ ನೀರನ್ನು ನಗರಕ್ಕೆ ಸಾಗಿಸಿ ಶುದ್ಧೀಕರಿಸಿ ದಿನಂಪ್ರತಿ ತಲಾ 135 ಲೀಟರ್‌ನಂತೆ ಒದಗಿಸಲು ಉದ್ದೇಶಿಸಿದ್ದು, 2024 ರೊಳಗೆ ಚಾಲನೆಗೊಳಿಸಲು ಉದ್ದೇಶಿಸಿದೆ.<br>**ಕಾಮಗಾರಿಯ ಅಂದಾಜು ವೆಚ್ಚದ ವಿವರಗಳು:**<br>ವಿನ್ಯಾಸ ಹಾಗೂ ನಿರ್ಮಾಣ ಅಂದಾಜು ಮೊತ್ತ: ರೂ.453.00 ಕೋಟಿಗಳು<br>11.5 ವರ್ಷಗಳ ನಿರ್ವಹಣಾ ಅಂದಾಜು ಮೊತ್ತ: ರೂ.289.20 ಕೋಟಿಗಳು<br>**ಒಟ್ಟು ಮೊತ್ತ**: **ರೂ.742.20 ಕೋಟಿಗಳು**<br>ಕಾಮಗಾರಿ ಗುತ್ತಿಗೆಯನ್ನು Design-Build-Operate-Transfer (DBOT) ಮಾದರಿಯಲ್ಲಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 279 ಪಿಆರ್‌ಜೆ 2018 ದಿನಾಂಕ: |

| | | |
|---|---|---|
| | | 22.10.2018 ರಲ್ಲಿ ಅನುಮೋದನೆ ನೀಡಲಾಗಿದೆ. ಅದರಂತೆ ಬಿಡ್ ದಸ್ತಾವೇಜುಗಳಿಗೆ ವಿಶ್ವಬ್ಯಾಂಕಿನ ಅನುಮೋದನೆ ದೊರೆತಿದ್ದು, ಟೆಂಡರ್‌ನ್ನು ಕರೆಯಲಾಗಿದೆ. ವಿಶ್ವಬ್ಯಾಂಕಿನಿಂದ ತಾಂತ್ರಿಕ ಬಿಡ್ಡಿನ ಮೌಲ್ಯಮಾಪನ ವರದಿಗೆ ದಿನಾಂಕ: 05.02.2020 ರಂದು ನಿರಾಕ್ಷೇಪಣೆ ಪತ್ರ ದೊರೆತಿರುತ್ತದೆ. ಆರ್ಥಿಕ ಬಿಡ್ಡನ್ನು ದಿನಾಂಕ:11.02.2020 ರಂದು ತೆರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹರಾಗಿರುವ ಏಕಮಾತ್ರ ಗುತ್ತಿಗೆದಾರರಾದ ಮೆ॥ ಎಲ್&ಟಿ ಲಿಮಿಟೆಡ್ ರವರ ಆರ್ಥಿಕ ಬಿಡ್ಡಿನ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದೆ. |

ನಅಇ 56 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.